SHREE
Mahalakshmi
SWEETS

ಆಂದೋಲನ
ದಿನಪತ್ರಿಕೆ
ಸಂಸ್ಥಾಪಕ ಸಂಪಾದಕ: ರಾಜಶೇಖರ ಕೋಟಿ

'ಸ್ಪೆಷಲ್ ಮೈಸೂರ್ ಪಾಕ್'ಗೆ ಇಂದೇ ಭೇಟಿ ಕೊಡಿ
ನ್ಯೂ ಬಾಂಬೆ ಟಿಫಾನೀಸ್
NEW BOMBAY TIFFANYS
ನಮ್ಮ ವಿಶೇಷತೆಗಳು: ಹೊಸ ಹೊಸ ಬಗೆಯ ಬೆಂಗಾಲಿ ಸ್ವೀಟ್ಸ್, ಮಿಲ್ಕ್ ಕೇಕ್, ಶುದ್ಧ ತುಪ್ಪದಿಂದ ತಯಾರಿಸಿದ ಸಿಹಿ ಮತ್ತು ಖಾರಾ ತಿಂಡಿಗಳು
1771/3 ವಿಕ್ಟೋರಿಯಾ ಕಾಂಪ್ಲೆಕ್ಸ್, ಸಯ್ಯಾಜಿರಾವ್ ರಸ್ತೆ, ಮೈಸೂರು
Contact: : ಮನೀಶ್ ಕುಮಾರ್,
ಮೊ: 9845111886, 4287475



ಶಿವಮೊಗ್ಗ ಜಿಲ್ಲೆ ಕುಪ್ಪಳಿಯ ಕವಿಶೈಲದಿಂದ ಹೊರಟ 'ಕುವೆಂಪು ವಿಶ್ವಮಾನವ ಸಂದೇಶ ಜಾಥಾ' ೨೫ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಿಶ್ವಮಾನವ ಸಂದೇಶ ತಲುಪಿಸಿ ಮೈಸೂರಿನ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಮಂಗಳವಾರ ಸಂಪನ್ನಗೊಂಡಿತು.

ಕುವೆಂಪು ವಿಶ್ವಮಾನವ ಸಂದೇಶ ಜಾಥಾ

ಕ್ರಿಕೆಟಿಗ ಪಠಾಣ್‌ಗೆ ೫ ತಿಂಗಳ ನಿಷೇಧ

೨೦೧೭ರಲ್ಲಿ ದೇಶಿ ಟಿ–೨೦ ಪಂದ್ಯಾವಳಿ ವೇಳೆ ಉದ್ದೀಪನ ಮದ್ದು ಸೇವನೆ ಆರೋಪಕ್ಕೊಳಗಾಗಿದ್ದ ಕ್ರಿಕೆಟಿಗ ಯೂಸುಫ್ ಪಠಾಣ್ 'ಡೋಪ್ ಟೆಸ್ಟ್'ನಲ್ಲಿ ನಪಾಸಾಗಿದ್ದು, ಬಿಸಿಸಿಐ ೫ ತಿಂಗಳ ನಿಷೇಧ ಹೇರಿದೆ.

ಗರಿಷ್ಠ: ೨೮° । ಕನಿಷ್ಠ: ೧೭°
ಬಿಸಿಲ ತಾಪ ಏರಿಕೆ, ಮಳೆ ಮೋಡಗಳು ದೂರ

ಸಂಪುಟ: ೪೭, ಸಂಚಿಕೆ: ೧೦, ರಾಷ್ಟ್ರೀಯ ಶಕ ೧೯೩೯ ಶಿಶಿರ: ಪುಷ್ಯ ೨೦, ನವಮಿ ಸ್ವಾತಿ, ಬುಧವಾರ, ಜ.೧೦, ೨೦೧೮, ದೂರವಾಣಿ: ೨೪೯೬೫೦೧, ೨೪೯೬೫೦೮, ೨೪೯೬೫೦೫, ಫ್ಯಾಕ್ಸ್: ೨೪೯೬೫೦೩, ಪುಟ : ೧೨, ರೂ. ೩

ಕೊಡಗಿನಲ್ಲಿ ಅಭಿವೃದ್ಧಿ ಪರ್ವ

■ ೧೨೨ ಕೋಟಿ ರೂ. ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ, ಶಂಕುಸ್ಥಾಪನೆ
■ ಅನ್ನ, ನೀರು, ಹಾಲು, ಮನೆ ಕೊಟ್ಟವರನ್ನು ಜನ ಮರೆಯಲ್ಲ: ಸಿಎಂ ವಿಶ್ವಾಸ

ಮಡಿಕೇರಿ,ಜ.೯– ಕೊಡಗು ಜಿಲ್ಲೆಯಲ್ಲಿ ಅಭಿವೃದ್ಧಿ ಪರ್ವ ಮುಂದುವರಿದಿದೆ. ಜಿಲ್ಲೆಯ ಸಮಗ್ರ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕಳೆದ ನಾಲ್ಕೂವರೆ ವರ್ಷಗಳಿಂದ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿರುವ ರಾಜ್ಯ ಸರ್ಕಾರ, ಮಂಗಳವಾರ ೧೨೨ ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳನ್ನು ಆರಂಭಿಸಿದೆ.

ನಗರದ ಕ್ರಿಸ್ಟಲ್ ಕೋರ್ಟ್ ಸಭಾಂಗಣದಲ್ಲಿ ಜಿಲ್ಲಾಡಳಿತ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಡಿಕೇರಿ ಮತ್ತು ವಿರಾಜಪೇಟೆ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಕೈಗೊಂಡಿರುವ ೧೨೨ ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು. ಇದೇ ವೇಳೆ ರಾಜ್ಯ ಸರ್ಕಾರದ ನಾಲ್ಕೂವರೆ ವರ್ಷಗಳ ಸಾಧನಾ ಸಂಭ್ರಮದ ಕಿರುಪುಸ್ತಕವನ್ನೂ ಬಿಡುಗಡೆ ಮಾಡಿದರು.

ನಂತರ ಮಾತನಾಡಿದ ಅವರು, ಕೊಡಗು ಜಿಲ್ಲೆಗೆ ಕಳೆದ ನಾಲ್ಕೂವರೆ ವರ್ಷಗಳಲ್ಲಿ ವಿವಿಧ ಇಲಾಖೆಗಳ ಮೂಲಕ ೨ ಸಾವಿರ ಕೋಟಿ ರೂ. ಗಳಿಗೂ ಹೆಚ್ಚು ಅನುದಾನ, ಜತೆಗೆ ೨೦೦ ಕೋಟಿ ರೂ. ವಿಶೇಷ ಅನುದಾನವನ್ನೂ ಒದಗಿಸಲಾಗಿದೆ ಎಂದರು.

ಸರ್ವತೋಮುಖ ಅಭಿವೃದ್ಧಿ: ಕೊಡಗು ಜಿಲ್ಲೆಯಲ್ಲಿ ೩೪ ಸಾವಿರ ಜನರಿಗೆ ಸಾಲ ಮನ್ನಾ ಮಾಡಲಾಗಿದೆ. ಭಾಗಮಂಡಲದಲ್ಲಿ ಮೇಲ್ಸೇತುವೆ ನಿರ್ಮಿಸಲಾಗಿದೆ. ಸರ್ಕಾರ ನುಡಿದಂತೆ ನಡೆದಿದೆ. ಅಭಿವೃದ್ಧಿ ಕಾರ್ಯಗಳಲ್ಲಿ ಸರ್ಕಾರ ತಾರತಮ್ಯ ಮಾಡುವುದಿಲ್ಲ. ರಾಜ್ಯದ ಸರ್ವತೋಮುಖ ಅಭಿವೃದ್ಧಿಯೇ ನಮ್ಮ ಸರ್ಕಾರದ ಉದ್ದೇಶ. ರಾಜ್ಯ ಸರ್ವತೋಮುಖ ಅಭಿವೃದ್ಧಿಯಾದಲ್ಲಿ ಕೊಡಗು ಸಹ ಪ್ರಗತಿ ಕಂಡಂತೆ ಎಂದು ತಿಳಿಸಿದರು.

ಪ್ರಥಮ ಸ್ಥಾನ: ಹಿಂದೆ ರಾಜ್ಯ ಕೈಗಾರಿಕಾ ಕ್ಷೇತ್ರದಲ್ಲಿ ೧೧ನೇ ಸ್ಥಾನದಲ್ಲಿತ್ತು, ಈಗ ಕೈಗಾರಿಕಾ ಬಂಡವಾಳ ಹೂಡಿಕೆಯಲ್ಲಿ ರಾಜ್ಯ ಪ್ರಥಮ ಸ್ಥಾನ ಪಡೆದಿದೆ. ತೆರಿಗೆ ಸಂಗ್ರಹದಲ್ಲಿಯೂ ಉತ್ತಮ ಸಾಧನೆ ಮಾಡಿದೆ. ಇದೇ ಕಾರಣಕ್ಕೆ ಮಾಜಿ ಪ್ರಧಾನಿ ಡಾ.ಮನಮೋಹನ ಸಿಂಗ್ ಅವರು ರಾಜ್ಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ಮುಖ್ಯಮಂತ್ರಿ ಹರ್ಷ ವ್ಯಕ್ತಪಡಿಸಿದರು.

ಅಭಿವೃದ್ಧಿ ವಿಚಾರದಲ್ಲಿ ಸುಳ್ಳು ಹೇಳಬಾರದು. ಜನರು ಅಧಿಕಾರ ನೀಡುವುದು, ಜನಸೇವೆ ಮಾಡಲು. ಇದನ್ನು ನಮ್ಮ ಸರ್ಕಾರ ಅರಿತಿದೆ. ಪ್ರಣಾಳಿಕೆಯಲ್ಲಿ ಪ್ರಕಟಿಸದ ವಿಷಯಗಳಿಗೂ ಸರ್ಕಾರ ಆದ್ಯತೆ ನೀಡಿದೆ. ರೈತರ ಸಾಲ ಮನ್ನಾ ಮಾಡಿದೆ. ಆರೋಗ್ಯ ಭಾಗ್ಯ, ಪಶು ಭಾಗ್ಯ, ಅನಿಲ ಭಾಗ್ಯ, ಶೂ ಭಾಗ್ಯ ಮೊದಲಾದ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಈ ಬಗ್ಗೆ ನನಗೆ ತೃಪ್ತಿ ಇದೆ ಎಂದು ಹೇಳಿದರು.

⏭ ೮

ಮಡಿಕೇರಿಯ ಕ್ರಿಸ್ಟಲ್ ಕೋರ್ಟ್ ಸಭಾಂಗಣದಲ್ಲಿ ಜಿಲ್ಲಾಡಳಿತ ಮಂಗಳವಾರ ಆಯೋಜಿಸಿದ್ದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡುವ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಎಂ.ಆರ್.ಸೀತಾರಾಂ, ವಿಧಾನ ಪರಿಷತ್ ಸದಸ್ಯರಾದ ವೀಣಾ ಅಚ್ಚಯ್ಯ, ರಾಜ್ಯ ರೇಷ್ಮೆ ಮಾರಾಟ ಮಂಡಳಿ ಅಧ್ಯಕ್ಷರಾದ ಟಿ.ಪಿ.ರಮೇಶ್, ನಗರಸಭೆ ಅಧ್ಯಕ್ಷೆ ಕಾವೇರಮ್ಮ ಸೋಮಣ್ಣ, ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಉಪಾಧ್ಯಕ್ಷರಾದ ಪದ್ಮಿನಿ ಪೊನ್ನಪ್ಪ, ಅರುಣ್ ಮಾಚಯ್ಯ ಮತ್ತಿತರರು ಉಪಸ್ಥಿತರಿದ್ದರು.

ಅಭಿವೃದ್ಧಿಗೆ ಅನುದಾನ

- ನಾಲ್ಕೂವರೆ ವರ್ಷಗಳಲ್ಲಿ ಕೊಡಗಿಗೆ ೨ ಸಾವಿರ ಕೋಟಿ ರೂ. ಅನುದಾನ
- ವಿಶೇಷ ಅನುದಾನ ಯೋಜನೆಯಡಿ ೨೦೦ ಕೋಟಿ ರೂ. ಬಿಡುಗಡೆ
- ಕೊಡಗಿನ ೩೪ ಸಾವಿರಕ್ಕೂ ಅಧಿಕ ರೈತರ ಸಾಲ ಮನ್ನಾ ಮಾಡಲಾಗಿದೆ
- ಭಾಗಮಂಡಲದಲ್ಲಿ ಮೇಲ್ಸೇತುವೆ ನಿರ್ಮಿಸಿ ಅನುಕೂಲ ಮಾಡಿಕೊಡಲಾಗಿದೆ

ನಾಣಯ್ಯ–ಸಿಎಂ ಕುತೂಹಲದ ಭೇಟಿ

ಮಡಿಕೇರಿ: ನಾಯಕರ ನಡೆ ವಿರುದ್ಧ ಅಸಮಾಧಾನಗೊಂಡಿರುವ ಮಾಜಿ ಸಚಿವ, ಜಾ.ದಳ ಹಿರಿಯ ಮುಖಂಡ ಎಂ.ಸಿ.ನಾಣಯ್ಯ ಅವರ ಮನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಸಂಜೆ ಭೇಟಿ ನೀಡಿ ಚರ್ಚಿಸಿರುವುದು ರಾಜಕೀಯ ವಲಯದಲ್ಲಿ ಸಂಚಲನ ಉಂಟುಮಾಡಿದೆ.

ಸಿಎಂ ಭೇಟಿ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಎಂ.ಆರ್.ಸೀತಾರಾಂ, ಕಾಂಗ್ರೆಸ್ ಮುಖಂಡರಾದ ಚಂದ್ರಮೌಳಿ ಮತ್ತಿತರರು ಉಪಸ್ಥಿತರಿದ್ದರು.

ಇತ್ತೀಚೆಗೆ ಎಂ.ಸಿ.ನಾಣಯ್ಯ ಅವರ ಅನುಪಸ್ಥಿತಿಯಲ್ಲಿ ಅವರ ಬೆಂಬಲಿಗರು ಸಭೆ ನಡೆಸಿ, ಜಾ.ದಳದಿಂದ ಹೊರಬರುವ ತೀರ್ಮಾನ ಕೈಗೊಂಡಿದ್ದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಸೇರುವುದೂ ಅಥವಾ ಬಂಡಾಯವೆದ್ದು ಸ್ಪರ್ಧೆ ನಡೆಸುವುದೊ ಎಂಬ ಬಗ್ಗೆ ಚರ್ಚೆಯಾಗಿತ್ತು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಿದ್ದರಾಮಯ್ಯ ಅವರು, ನಾನು ಮತ್ತು ನಾಣಯ್ಯ ಅವರು ಬಹಳ ವರ್ಷಗಳ ಸ್ನೇಹಿತರು. ಅವರ ಆರೋಗ್ಯ ಸರಿ ಇಲ್ಲ ಎಂದು ಗೊತ್ತಾಗಿದ್ದರಿಂದ ಭೇಟಿ ಮಾಡಿದೆ. ಬೇರೆ ಪಕ್ಷದವರನ್ನು ಭೇಟಿ ಮಾಡಿದಾಗ ಕುತೂಹಲ ಮೂಡುವುದು ಸಹಜ. ರಾಜಕೀಯ ಚರ್ಚೆಯೇನೂ ಆಗಿಲ್ಲ. ನಾಣಯ್ಯ ಬಹಳ ಹಿರಿಯ ನಾಯಕರು. ಅವರನ್ನು ಜಾ.ದಳ ಸಮರ್ಥ ರೀತಿಯಲ್ಲಿ ಬಳಸಿಕೊಳ್ಳಲಿಲ್ಲ ಎಂದರು.

⏭ ೮

ಬಡ್ತಿಗೆ ಮೀಸಲಾತಿ: ಪರಿಷ್ಕೃತ ಪಟ್ಟಿ ಸಿದ್ಧ

■ ಜ.೧೫ಕ್ಕೆ ಸರ್ವೋಚ್ಚ ನ್ಯಾಯಾಲಯದಲ್ಲಿ ಮೀಸಲಾತಿ ಕುರಿತ ಅರ್ಜಿ ವಿಚಾರಣೆ
■ ರಾಜ್ಯ ಸರ್ಕಾರದಿಂದ ಪರಿಷ್ಕೃತ ಜ್ಯೇಷ್ಠತಾ ಪಟ್ಟಿ ಜತೆಗೆ ಪ್ರಮಾಣಪತ್ರ ಸಲ್ಲಿಕೆಗೆ ಸಿದ್ಧತೆ

ಮೈಸೂರು,ಜ.೯– ಬಡ್ತಿ ಮೀಸಲಾತಿಗೆ ಸಂಬಂಧಿಸಿ ಜ.೧೫ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಅರ್ಜಿ ವಿಚಾರಣೆಗೆ ಬರಲಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಪರಿಷ್ಕೃತ ಜ್ಯೇಷ್ಠತಾ ಪಟ್ಟಿಯೊಂದಿಗೆ ಪ್ರಮಾಣಪತ್ರ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿದೆ.

ನ್ಯಾಯಾಂಗ ನಿಂದನೆ ತೂಗುಗತ್ತಿಯಿಂದ ಪಾರಾಗಲು ರಾಜ್ಯ ಸರ್ಕಾರ ಪರಿಷ್ಕೃತ ಜ್ಯೇಷ್ಠತಾ ಪಟ್ಟಿ ಜತೆ ಪ್ರಮಾಣಪತ್ರವನ್ನೂ ಸಲ್ಲಿಸಲಿದೆ. ನಂತರ ನ್ಯಾಯಾಲಯದ ಸೂಚನೆ ಮೇರೆಗೆ ಮುಂದಿನ ಪ್ರಕ್ರಿಯೆ ನಡೆಸಲಿದೆ ಎಂದು ತಿಳಿದುಬಂದಿದೆ.

ಮತ್ತೊಂದೆಡೆ ಕೇಂದ್ರ ಗೃಹ ಇಲಾಖೆ ಸೂಚನೆ ಮೇರೆಗೆ ಆಡಳಿತ ಮತ್ತು ಸಿಬ್ಬಂದಿ ಸುಧಾರಣೆ ಇಲಾಖೆ ಪ್ರಧಾನ ಕಾರ್ಯದರ್ಶಿ ಅನಿಲ್ ಕುಮಾರ್ ಝಾ ಅವರು ದಿಲ್ಲಿಗೆ ತೆರಳಿ ರಾಜ್ಯ ಸರ್ಕಾರ ರೂಪಿಸಿರುವ ನೂತನ ಮೀಸಲು ವಿಧೇಯಕದ ಬಗ್ಗೆ ವಿವರಣೆ ನೀಡಿ ಬಂದಿದ್ದಾರೆ.

'ಮೀಸಲಾತಿಯಡಿ ಬಡ್ತಿ ಪಡೆದಿರುವ ಪರಿಶಿಷ್ಟ ಜಾತಿ, ಪಂಗಡದ ಸರ್ಕಾರಿ ನೌಕರರ ಹಿತವನ್ನು ಕಾಪಾಡುವ ವಿಧೇಯಕ'ವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಳಗಾವಿಯಲ್ಲಿ ನಡೆದ ಚಳಿಗಾಲದ ವಿಧಾನ ಮಂಡಲ ಅಧಿವೇಶನದಲ್ಲಿ ನ.೧೮ರಂದು ಮಂಡಿಸಿದ್ದರು.

- ೧೯೭೮ರಿಂದ ಪೂರ್ವಾನ್ವಯವಾಗುವಂತೆ ಪಟ್ಟಿ
- ಇಲಾಖಾವಾರು ಪರಿಷ್ಕೃತ ಜೇಷ್ಠತಾ ಪಟ್ಟಿ ಸಿದ್ಧ
- ಕೆಲವು ಇಲಾಖೆಗಳು ವೈಬ್ ಸೈಟ್‌ನಲ್ಲಿಯೂ ಪ್ರಕಟ
- ಯಾರಿಗೆ ಮುಂಬಡ್ತಿ/ಹಿಂಬಡ್ತಿ ಎಂಬ ಸ್ಪಷ್ಟತೆ ಇಲ್ಲ

ಪರಿಷ್ಕೃತ ಪಟ್ಟಿ ಸಿದ್ಧ: ಇನ್ನೊಂದೆಡೆ, ಎಲ್ಲ ಇಲಾಖೆಗಳಲ್ಲಿ ಬಡ್ತಿಗೆ ಅರ್ಹರಾದವರ ಜ್ಯೇಷ್ಠತಾ ಪಟ್ಟಿಯನ್ನೂ ಸಿದ್ಧಪಡಿಸಿಕೊಳ್ಳಲಾಗಿದೆ. ಆಡಳಿತ ಮತ್ತು ಸಿಬ್ಬಂದಿ ಸುಧಾರಣಾ ಇಲಾಖೆ ಬಳಿ ಈ ಪರಿಷ್ಕೃತ ಜ್ಯೇಷ್ಠತಾ ಪಟ್ಟಿ ಇದೆ. ಇದರ ಜತೆಗೇ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸುವುದಕ್ಕಾಗಿ ಪ್ರಮಾಣಪತ್ರವನ್ನೂ ಸಿದ್ಧ ಮಾಡಿಕೊಳ್ಳುವಂತೆ ಇಲಾಖೆಗೆ ಸೂಚನೆ ನೀಡಲಾಗಿದೆ.

ಇಲಾಖಾವಾರು ಪಟ್ಟಿ: ಇಲಾಖಾವಾರು ಪರಿಷ್ಕೃತ ಜ್ಯೇಷ್ಠತಾ ಪಟ್ಟಿ ಸಿದ್ಧಗೊಂಡಿದ್ದು, ಕೆಲವು ಇಲಾಖೆಗಳು ವೈಬ್‌ಸೈಟ್‌ನಲ್ಲಿಯೂ ಪ್ರಕಟಿಸಿವೆ. ಆದರೆ, ಅದರಲ್ಲಿ ಯಾರಿಗೆ ಮುಂಬಡ್ತಿ, ಯಾರಿಗೆ ಹಿಂಬಡ್ತಿ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ.

⏭ ೮

ಬಂಡೀಪುರ: ಗಣತಿಯ ೨ನೇ ದಿನ ಕಾಡೆಮ್ಮೆ ಗೋಚರ

ಹುಲಿ ಗಣತಿಯ ೨ನೇ ದಿನವಾದ ಮಂಗಳವಾರ ಗುಂಡ್ಲುಪೇಟೆ ತಾಲ್ಲೂಕು ಬಂಡೀಪುರ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಹೆಡಿಯಾಲ ವಲಯದ ಸೂಳೆಕಟ್ಟೆ ಮತ್ತು ಶಂಭು ಕಟ್ಟೆ ಬಳಿ ನೀರು ಕುಡಿಯುತ್ತಿದ್ದ ಕಾಡೆಮ್ಮೆ ಗಣತಿದಾರರಿಗೆ ಗೋಚರಿಸಿದೆ. ೪ ಹುಲಿ, ಚಿರತೆ, ಕಾಡುಹಂದಿ, ಬಲು ಅಪರೂಪದ ೨ ನಾದರನ್ ಪಿನ್‌ಟೇಲ್ ಹಕ್ಕಿಗಳು ಗೋಚರಿಸಿವೆ.

ಚಿತ್ರಮಂದಿರದಲ್ಲಿ ರಾಷ್ಟ್ರಗೀತೆ ಕಡ್ಡಾಯವಲ್ಲ

ತನ್ನದೇ ಆದೇಶ ಬದಲಿಸಿದ ಸರ್ವೋಚ್ಚ ನ್ಯಾಯಾಲಯ

ಹೊಸದಿಲ್ಲಿ,ಜ.೯– ಇನ್ನು ಮುಂದೆ ಚಿತ್ರಮಂದಿರಗಳಲ್ಲಿ ರಾಷ್ಟ್ರಗೀತೆ ಕಡ್ಡಾಯವಲ್ಲ ಎಂದು ಹೇಳುವ ಮೂಲಕ ಈ ಹಿಂದಿನ ತನ್ನದೇ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯ ಮಂಗಳವಾರ ಬದಲಿಸಿದೆ.

ಚಿತ್ರಮಂದಿರಗಳಲ್ಲಿ ರಾಷ್ಟ್ರಗೀತೆ ಕಡ್ಡಾಯಗೊಳಿಸಿ ನ್ಯಾಯಾಲಯ ೨೦೧೬ರಲ್ಲಿ ನೀಡಿದ್ದ ಆದೇಶವನ್ನು ಮರು ಪರಿಶೀಲನೆ ಮಾಡುವಂತೆ ಕೇಂದ್ರ ಸರ್ಕಾರ ಸೋಮವಾರ ಪ್ರಮಾಣಪತ್ರ ಸಲ್ಲಿಸಿತ್ತು. ಅದರ ಬೆನ್ನಲ್ಲೇ ನ್ಯಾಯಾಲಯದ ಬದಲಾದ ಆದೇಶ ಹೊರಬಿದ್ದಿದೆ.

- ೨೦೧೬ರಲ್ಲಿ ಸುಪ್ರೀಂ ಮೊದಲ ಆದೇಶ
- ೨೦೧೭ರ ಅಕ್ಟೋಬರ್ ನಿಂದ ಕಡ್ಡಾಯ
- ಕಡ್ಡಾಯ ಬೇಡವೆಂದು ಕೇಂದ್ರದ ಅರ್ಜಿ
- ಮಾರ್ಗಸೂಚಿ ರಚನೆಗೆ ಸಚಿವರ ಸಮಿತಿ

ಚಿತ್ರಮಂದಿರಗಳಲ್ಲಿ ರಾಷ್ಟ್ರಗೀತೆ ಕಡ್ಡಾಯಗೊಳಿಸಬಾರದು. ಈ ಬಗ್ಗೆ ಮಾರ್ಗದರ್ಶಕ ಸೂಚಿ ಸಿದ್ಧಪಡಿಸಲು ಸಚಿವರ ಸಮಿತಿ ರಚಿಸಲಾಗುವುದು ಎಂದು ಕೇಂದ್ರ ಗೃಹ ಸಚಿವಾಲಯದಿಂದ ಪ್ರಮಾಣಪತ್ರ ಸಲ್ಲಿಕೆಯಾಗಿತ್ತು. ಚಿತ್ರಮಂದಿರಗಳಲ್ಲಿ ರಾಷ್ಟ್ರಗೀತೆ ಪ್ರಸ್ತುತಪಡಿಸಲು ೨೦೧೬ರ ನವೆಂಬರ್‌ನಲ್ಲಿ ಆದೇಶಿಸಲಾಗಿತ್ತು.

ಭೂಮಿ ಸಕ್ರಮ ಸಮಿತಿಯಿಂದ ಭೂ ಅಕ್ರಮ ಆರೋಪ

ಆರ್.ಅಶೋಕ್ ವಿರುದ್ಧ ಎಫ್‌ಐಆರ್

ಅಂದಿನ ತಹಸಿಲ್ದಾರ್, ಕಂದಾಯಾಧಿಕಾರಿ ಸೇರಿ ಐವರ ಬಂಧನ

ಬೆಂಗಳೂರು,ಜ.೯– ಬಗರ್‌ಹುಕುಂ ಸಾಗುವಳಿ ಸಮಿತಿಯಿಂದ ಅಕ್ರಮವಾಗಿ ಭೂಮಿ ಹಂಚಿಕೆ ಮಾಡಿದ ಆರೋಪ ಸಂಬಂಧ ಮಾಜಿ ಉಪ ಮುಖ್ಯಮಂತ್ರಿ ಆರ್.ಅಶೋಕ್ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ) ಮಂಗಳವಾರ ಎಫ್‌ಐಆರ್ ದಾಖಲಿಸಿದೆ.

ಆರ್.ಅಶೋಕ್

ಬಗರ್‌ಹುಕುಂ ಭೂಮಿ ಸಕ್ರಮ ಸಮಿತಿ ಅಧ್ಯಕ್ಷರಾಗಿದ್ದಾಗ ಆರ್.ಅಶೋಕ್ ಅವರು ಸಾಗುವಳಿ ಭೂಮಿಯನ್ನು ಅಕ್ರಮವಾಗಿ ಹಂಚಿಕೆ ಮಾಡಿದ್ದಾರೆ. ಇದರಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ವ್ಯಕ್ತಿಯೊಬ್ಬರು ದೂರು ನೀಡಿದ್ದರು. ಆ ದೂರಿನ ಆಧಾರದ ಮೇಲೆ ಎಸಿಬಿ ಅಧಿಕಾರಿಗಳು ಈಗ ಆರ್.ಅಶೋಕ್ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ಕಲಂ ೧೩(೧)(ಡಿ), ೧೩(೧) (ಇ), ೧೩(೨) ಹಾಗೂ ಭಾರತೀಯ ದಂಡ ಸಂಹಿತೆ (ಐಪಿಸಿ)ಯ ಕಲಂ ೪೨೦, ೧೨೦(ಬಿ) ಅಡಿ ಪ್ರಕರಣ ದಾಖಲಿಸಿದ್ದಾರೆ.

ಅಲ್ಲದೇ ಪ್ರಕರಣ ನಡೆದಾಗ ತಹಸಿಲ್ದಾರ್ ಆಗಿದ್ದ ರಾಮಚಂದ್ರಯ್ಯ, ಕಂದಾಯ ಅಧಿಕಾರಿಯಾಗಿದ್ದ ಗವೀಗೌಡ, ಚೌಡೇಗೌಡ ಸೇರಿದಂತೆ ಐವರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಐವರನ್ನೂ ಬಂಧಿಸಲಾಗಿದೆ.

ಉತ್ತರಹಳ್ಳಿ ಕ್ಷೇತ್ರದ ಅಂದಿನ ಶಾಸಕ ಆರ್.ಅಶೋಕ್ ೧೯೯೮ರಿಂದ ೨೦೦೮ರವರೆಗಿನ ಅವಧಿಯಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಭೂ ಸಕ್ರಮೀಕರಣ ಸಮಿತಿ ಅಧ್ಯಕ್ಷರಾಗಿದ್ದರು. ಪ್ರಕರಣಕ್ಕೆ ಸಂಬಂಧಿಸಿ ವಿಚಾರಣೆಗೆ ಹಾಜರಾಗುವಂತೆ ಎಸಿಬಿ ಅಧಿಕಾರಿಗಳು ಆರ್.ಅಶೋಕ್ ಅವರಿಗೆ ನೋಟಿಸ್ ನೀಡುವ ಸಾಧ್ಯತೆ ಇದೆ.

ಮಹಾಪೌರ ಚುನಾವಣೆ: ಪೈಪೋಟಿ ಶುರು

ಮೈಸೂರು,ಜ.೯– ಮಹಾನಗರ ಪಾಲಿಕೆ ಮಹಾಪೌರ ಸ್ಥಾನದ ಚುನಾವಣೆಗೆ ದಿನಾಂಕ ಘೋಷಣೆಯಾಗುತ್ತಿದ್ದಂತೆಯೇ ಕಾಂಗ್ರೆಸ್ ಪಾಳಯದಲ್ಲಿ ರಾಜಕೀಯ ಚಟುವಟಿಕೆ ಗರಿಗೆದರಿದೆ. ಪಾಲಿಕೆಯಲ್ಲಿನ ಕಾಂಗ್ರೆಸ್ ಸದಸ್ಯರಲ್ಲಿ ಸಂಚಲನ ಉಂಟಾಗಿದೆ.

ಉಪ ಮಹಾಪೌರ ಸ್ಥಾನ ಪರಿಶಿಷ್ಟ ಪಂಗಡದ ಮಹಿಳೆಗೆ ಮೀಸಲಾಗಿದ್ದು, ಜಾ.ದಳದ ಇಂದಿರಾ ಮಹೇಶ್ (ವಾರ್ಡ್ ನಂ.೬೧) ಅವರು ಮಾತ್ರವೇ ಅರ್ಹ ಅಭ್ಯರ್ಥಿಯಾಗಿದ್ದಾರೆ. ಅವರ ಆಯ್ಕೆ ಖಚಿತವಾಗಿದೆ.

ಆದರೆ, ಮಹಾಪೌರ ಸ್ಥಾನ ಪರಿಶಿಷ್ಟ ಜಾತಿ ಮಹಿಳೆಗೆ ಮೀಸಲಾಗಿದೆ. ಮಹಾಪೌರ ಸ್ಥಾನಕ್ಕೆ ಜಾ.ದಳ, ಬಿಜೆಪಿಯಲ್ಲಿ ಅಭ್ಯರ್ಥಿಗಳೇ ಇಲ್ಲ. ಆದರೆ, ಕಾಂಗ್ರೆಸ್‌ನಲ್ಲಿ ಇಬ್ಬರಿಗೆ ಪ್ರಥಮ ಪ್ರಜೆಯಾಗುವ ಅರ್ಹತೆ ಇರುವುದರಿಂದ ಪೈಪೋಟಿ ಶುರುವಾಗಿದೆ.

ಮುಖಂಡರ ಭೇಟಿ: ಕಾಂಗ್ರೆಸ್ ಸದಸ್ಯರಾದ ಕಮಲಾ ಉದಯ್ (ವಾರ್ಡ್ ನಂ.೫೦) ಹಾಗೂ ಭಾಗ್ಯವತಿ (ವಾರ್ಡ್ ನಂ.೨೩) ನಡುವೆ ಮಹಾಪೌರ ಸ್ಥಾನಕ್ಕೆ ತೀವ್ರ ಪೈಪೋಟಿ ಏರ್ಪಟ್ಟಿದೆ. ಇಬ್ಬರೂ ಸದಸ್ಯರು ನಗರಪಾಲಿಕೆ ಸದಸ್ಯರನ್ನು, ಶಾಸಕರನ್ನು ಹಾಗೂ ಮುಖಂಡರನ್ನು ಭೇಟಿ ಮಾಡಲು ಆರಂಭಿಸಿ ಬೆಂಬಲ ಕೋರುತ್ತಿದ್ದಾರೆ.

⏭ ೮

* ಪ್ರಯತ್ನ ತೀವ್ರಗೊಳಿಸಿರುವ ಭಾಗ್ಯವತಿ–ಕಮಲಾ ಉದಯ್
* ಪಾಲಿಕೆ ಸದಸ್ಯರು, ಶಾಸಕರು, ಪಕ್ಷದ ಮುಖಂಡರ ಭೇಟಿ

ಭಾಗ್ಯವತಿ

ಕಮಲಾ ಉದಯ್

ಕಳೆದ ಅವಧಿಯ ಕೊನೆ ವರ್ಷ ಎಸ್‌ಸಿ ಮಹಿಳೆಗೆ ಮೀಸಲು ಕಲ್ಪಿಸಿದ್ದರಿಂದ ದಲಿತ ಮಹಿಳೆಗೆ ಮಹಾಪೌರರಾಗುವ ಅವಕಾಶ ವಾಗಿತ್ತು. ಈಗ ಬೋವಿ ಮಹಿಳೆಗೆ ಅವಕಾಶ ನೀಡಬೇಕು.

-ಸಮುದಾಯದ ನಾಯಕರ ಆಗ್ರಹ

ಈವರೆಗೆ ಗಾಂಧಿ ನಗರ ವಾರ್ಡ್‌ಗೆ ಮಹಾಪೌರರ ಸ್ಥಾನ ದೊರೆತೇ ಇಲ್ಲ. ಈ ಬಾರಿಯಾದರೂ ಈ ವಾರ್ಡ್ ಪ್ರತಿನಿಧಿಗೆ ಅವಕಾಶ ಮಾಡಿಕೊಡಬೇಕು.

-ಕಮಲಾ ಉದಯ್

ಎಲ್‌ಎಲ್‌ಆರ್ ಪಡೆಯುವುದು ಇನ್ನು ಸುಲಭ

ಮೈಸೂರು: ನಗರದ ಆರ್‌ಟಿಒ ಕಚೇರಿಗಳಲ್ಲಿ ಮಧ್ಯವರ್ತಿಗಳ ಹಾವಳಿ ತಪ್ಪಿಸುವ ಹಾಗೂ ಅರ್ಹರಿಗೆ ಕಲಿಕಾ ಚಾಲನಾ ಪರವಾನಗಿ ಕೊಡಿಸುವ ಉದ್ದೇಶದಿಂದ ಪೊಲೀಸ್ ಇಲಾಖೆ ಹೊಸ ಯೋಜನೆಯೊಂದನ್ನು ರೂಪಿಸಿದೆ. ಅದರನ್ವಯ ೧೮ ವರ್ಷ ಮೇಲ್ಪಟ್ಟ ಅಭ್ಯರ್ಥಿಗಳಿಗೆ ಪೊಲೀಸರೇ ಮುಂದೆನಿಂತು ಕಲಿಕಾ ಪರವಾನಗಿ ನೀಡುವ ಕಾರ್ಯ ಆರಂಭಿಸಲಾಗಿದೆ.

⏭ ವರದಿ ಪುಟ ೧೦

ರಾಜಶೇಖರ ಕೋಟಿ ಸ್ಮರಣೆ: ಒಡನಾಡಿಗಳಿಂದ ಲೇಖನ ಆಹ್ವಾನ

ಮೈಸೂರು,ಜ.೯– ಮೈಸೂರು ಜಿಲ್ಲಾ ಪತ್ರಕರ್ತರ ಸಂಘ 'ಆಂದೋಲನ' ದಿನಪತ್ರಿಕೆ ಸಂಸ್ಥಾಪಕ ಸಂಪಾದಕ ರಾಜಶೇಖರ ಕೋಟಿ ಅವರ ಜೀವನ ಆಧಾರಿತ ಪುಸ್ತಕವನ್ನು ಹೊರ ತರುವ ಉದ್ದೇಶದಿಂದ ಕೋಟಿ ಅವರ ಒಡನಾಡಿಗಳಿಂದ ಲೇಖನಗಳನ್ನು ಆಹ್ವಾನಿಸಿದೆ.

ಗ್ರಂಥವನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರ ನೇತೃತ್ವದಲ್ಲಿ ಹೊರ ತರಲಾಗುತ್ತಿದ್ದು, ಕೋಟಿ ಅವರ ಹಿತೈಷಿಗಳು, ಸ್ನೇಹಿತರು ಹಾಗೂ ಅವರಿಂದ ಪ್ರಭಾವಿತರಾದವರು ಲೇಖನಗಳನ್ನು ಜ.೨೫ರೊಳಗೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವಿಳಾಸಕ್ಕೆ ಇಲ್ಲವೇ mysorebabu@gmail.comಗೆ ಕಳುಹಿಸಬಹುದಾಗಿದೆ.

ವಿವರಗಳಿಗೆ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಜೆ.ಲೋಕೇಶ್ ಬಾಬು (೯೯೧೬೮೨೩೪೫೩) ಅವರನ್ನು ಸಂಪರ್ಕಿಸಬಹುದು.

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 402
ದೂರವಾಣಿ: 2425156

Wednesday 10 January 2018
ಆಂದೋಲನ
ಸುದ್ದಿಗಾಗಿ
andolana@gmail.com

22 ಕ್ಯಾರೆಟ್ ಚಿನ್ನದ ದರ
ತೊಳಸಿ
THOLASI JEWELS
₹2758
1 ಗ್ರಾಂಗೆ
ಹಿಂದಿನ ದಿನದ ದರ
ಅಶೋಕ ರೋಡ್, ಮೈಸೂರು
Ph: 2521926, 2441926